# ದಿನಾಂಕ-24/12/2020ರಂದು ನಡೆದ ವಾರ್ಡ್ ಸಮಿತಿ ಸಭೆ ಮತ್ತು ಕೋವಿಡ್-19 ನಿರ್ವಹಣ ಸಮಿತಿಯ ನಡವಳಿಗಳು.

ಮೇಲ್ಕಂಡ ವಿಷಯಕ್ಕೆ ಸಂಬಂದಿಸಿದಂತೆ ದಿನಾಂಕ-24/12/2020 ರಂದು ನಡೆದ ವಾರ್ಡ್ ಸಮಿತಿ ಸಭೆಯನ್ನು ಆರಂಭಿಸಿದ ವಾರ್ಡ್ ಸಮಿತಿ ಕಾರ್ಯದರ್ಶಿಗಳಾದ ಕೇಶವ್ ಪಾಟಿಲ್ ರವರು ಎಲ್ಲರಿಗು ಸ್ವಾಗತಕೋರಿದರು ನಂತರ ವಾರ್ಡಿನ ಕುಂದು ಕೊರತೆಗಳನ್ನು ಚರ್ಚಿಸುವಂತೆ ಸಭೆಯ ಎಲ್ಲರಿಗು ತಿಳಿಸಿದರು ನಂತರ ಆದ ವಾರ್ಡ್ ಸಮಿತಿ ಸಭೆ ನಿರ್ವಹಣ ಸಮಿತಿಯ ನಡವಳಿಗಳು ಈ ಕೆಳಕಂಡಂತಿವೆ.

| ಒಟ್ಟು ಸದಸ್ಯರ ಸಂಖ್ಯೆ:12 | | |
|---|---|---|
| 1 | ಶ್ರೀ.ಎಂ,ಕೆ,ವೇಂಕಟೇಶ್ (ನೋಡಲ್ ಅಧಿಕಾರಿಗಳು) | ಹಾಜರು |
| 2 | ಕೇಶವ್ ಪಾಟಿಲ್(ವಾರ್ಡ್ ಸಮಿತಿ ಕಾರ್ಯದರ್ಶಿ) | ಹಾಜರು |
| 3 | ಆನಂದ್ | ಹಾಜರು |
| 4 | ಕಮಲಮ್ಮ | ಗೈರುಹಾಜರು |
| 5 | ವನಜ | ಹಾಜರು |
| 6 | ಗಾಯತ್ರಿ | ಹಾಜರು |
| 7 | ಶ್ರೀ ಗೋಪಿನಾಥ್ ನಾಯ್ಡು | ಗೈರುಹಾಜರು |
| 8 | ಜಯಂತಿ | ಹಾಜರು |
| 9 | ಆರ್.ಬಾಬು ಮಂಜುನಾಥ್ | ಹಾಜರು |
| 10 | ಶಶಿರೇಖ | ಹಾಜರು |
| 11 | ಬಿ ಪುಷ್ಪ ರಾಜ್ | ಹಾಜರು |
| 12 | ಪಾರ್ಥ ಸಾರತಿ ಜಿ. | ಹಾಜರು |

1.ಸದಸ್ಯರೆಲ್ಲರು ಪಾದಚಾರಿ ಸ್ಥಳವನ್ನು ತೆರೆವುಗೊಳಿಸುವಂತೆ ಅಧಿಕಾರಿಗಳಿಗೆ ತಿಳಿಸಿದರು ಅದಕ್ಕೆ ಸ್ಪಂದಿಸಿದ ನೂಡಲ್ ಅಧಿಕಾರಿಗಳು ಮತ್ತು ಕೇಶವ್ ಪಾಟಿಲ್ ರವರು ಮುಂದಿನ ವಾರ ಆರಕ್ಷಕ ಸಿಬ್ಬಂದಿ ಮತ್ತು ಸಂಚಾರಿ ಅಧಿಕಾರಿಗಳೊಂದಿಗೆ ತೆರವು ಕೆಲಸ ಮಾಡುವುದಾಗಿ ತಿಳಿಸಿದರು.

2.ವಿಜಿನಾಪುರದ ಗ್ರಾಂಥಲಯದ ಬಳಿ ಇರುವ ಖಾಲಿ ಜಾಗದಲ್ಲಿ ಮಳಿಗೆಯನ್ನು ತೆರೆಯಲು ಮತ್ತು ಮಳಿಗೆಗೆ ವಿದ್ಯುತ್ ಸಂಪರ್ಕ ನಿಡಲು ಸದಸ್ಯರೆಲ್ಲರು ಒಮ್ಮತದಿಂದ ಸಮ್ಮತಿಸಿದರು.

3.ಕೆ,ಆರ್,ಪುರ ರೈಲ್ವೆ ಫ್ಲಾಟ್ ಫಾರ್ಮ್‌ನ ಬಳಿ ಇರುವ ಸಿತಾರ್ ಕಾಂಪನಿಯ ಬಳಿ ಪಾದಚರಿಗಳ ಸಂಚಾರಕ್ಕೆ ಯಾವುದೆ ತೊಂದರೆ ಆಗದಂತೆ ನಂದಿನಿ ಪಾರ್ಲರ್ ಮಳಿಗೆ ನಿರ್ಮಿಸಲು ಮತ್ತು ಮಳಿಗೆಗೆ ವಿದ್ಯುತ್ ಸಂಪರ್ಕ ನಿಡಲು ಸದಸ್ಯರೆಲ್ಲರು ಒಮ್ಮತದಿಂದ ಸಮ್ಮತಿಸಿದರು.

4.ಸಾರ್ವಜನಿಕರೊಬ್ಬರು ಲಕ್ಷ್ಮಣಮೂರ್ತಿ ನಗರದ ಮೊದಲನೇ ಕ್ರಾಸ್ ರಸ್ತೆ ಹದಗೆಟ್ಟಿದ್ದು ಹೊಸ ರಸ್ತೆ ಮಾಡಿಸುವಂತೆ ವಾರ್ಡ್ ಅಭಿಯಂತರರಾದ ಕೇಶವ್ ಪಾಟಿಲ್‌ರವರಿಗೆ ತಿಳಿಸಿದರು ಅದಕ್ಕೆ ಸ್ಪಂದಿಸಿದ ಅಭಿಯಂತರರು ರಸ್ತೆ ಪರಿಶಿಲಿಸಿ ಕಾಮಗಾರಿ ಕೈಗೋಳ್ಳುವುದಾಗಿ ತಿಳಿಸಿದರು.

5.ಬಿಡಿಎ ಲೇಔಟ್‌ನ ಕೆಲವು ರಸ್ತೆಯಲ್ಲಿ ಹಳೆಯ ಗಾಡಿಗಳನ್ನು ರಸ್ತೆಯಲ್ಲಿ ನಿಲ್ಲಿಸಿದ್ದು ಅದನ್ನು ತೆರವುಗೊಳಿಸುವಂತೆ ಸಾರ್ವಜನಿಕರು ಅಧಿಕಾರಿಗಳಿಗೆ ತಿಳಿಸಿದರು ಅದಕ್ಕೆ ಸ್ಪಂದಿಸಿದ ಅಧಿಕಾರಿಗಳು ಸಮಸ್ಯೆ ಬಗೆಹರಿಸಿ ಕೊಡುವ ಬರವಸೆ ನೀಡಿದರು.

6.ಆರ್ ಟಿ ಓ ಕಛೇರಿ ಬಳಿ ಇರುವ ರಸ್ತೆ ಕಾಮಾಗಾರಿಯ ಬಗ್ಗೆ ಸಾರ್ವಜನಿಕರು ಪ್ರಶ್ನಿಸಿದರು ಆಗ ಅಭಿಯಂತರರು ಕೂಡಲೆ ಗಮನ ಹರಿಸುವುದಾಗಿ ತಿಳಿಸಿದರು.

7.ಬೀದಿ ದೀಪದ ಸಮಸ್ಯೆಯ ಬಗ್ಗೆ ಸದಸ್ಯರೊಬ್ಬರು ಪ್ರಶ್ನಿಸಿದಾಗ ಸ್ಪಂದಿಸಿದ ಅಧಿಕಾರಿಗಳು ಸಮಸ್ಯೆಯನ್ನು ಬಗೆಹರಿಸಿ ಕೊಡುವ ಬರವಸೆ ನೀಡಿದರು

8.ಕಳೆದ ಬಾರಿ ಚರ್ಚಿಸಿದ ವಿಷಯವಾದ ಟಾಟಾ ಸ್ಟೀಲ್ ಬಳಿ ಇರುವ ಕಸವನ್ನು ತೆಗೆದಿರುವುದಾಗಿ ಸದಸ್ಯರಿಗೆ ಅಭಿಯಂತರರಾದ ಕೇಶವ್ ಪಾಟಿಲ್‌ರವರು ತಿಳಿಸಿದರು.

ಸಭೆಯನ್ನು ಮೂಕ್ತಯಗೊಳಿಸುವ ಮುಂಚೆ ವಾರ್ಡ್ ಸಮಿತಿ ಕಾರ್ಯದರ್ಶಿಗಳು ಸಭೆಯಲ್ಲಿದ್ದ ಆರೋಗ್ಯದಿಕಾರಿಗಳು,ವಾರ್ಡ್ ಅಭಿಯಂತರರು,BWSSB ಅಭಿಯಂತರರು ಮತ್ತು ಸಭೆಯಲ್ಲಿ ಹಾಜರಿದ್ದ ಎಲ್ಲಾ ಅಧಿಕಾರಿಗಳಿಗೆ ಹಾಗು ಸಭೆಗೆ ಹಾಜರಾಗಿದ್ದ ವಾರ್ಡ್ ಕಮಿಟಿ ಸದಸ್ಯರಿಗೆ ಹಾಗು ಸಾರ್ವಜನಿಕರಿಗೆ ವಂದನೆಗಳನ್ನು ತಿಳಿಸುತ್ತಾ ಸಭೆಯನ್ನು ಮುಕ್ತಾಯಗೊಳಿಸಿದರು.

ವಾರ್ಡ್ ಸಮಿತಿ ಕಾರ್ಯದರ್ಶಿಗಳು
ವಾರ್ಡ್ ಸಂಖ್ಯೆ-51

ನೋಡಲ್ ಅಧಿಕಾರಿಗಳು
ವಾರ್ಡ್ ಸಂಖ್ಯೆ-51

ಕಾರ್ಯಪಾಲಕ ಅಭಿಯಂತರರು
ಸಿ.ವಿ. ರಾಮನ್ ನಗರ ವಿಭಾಗ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಬೆಂಗಳೂರು